# <u>ಪತ್ರಿಕಾ ಪ್ರಕಟಣೆ</u>

**ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಧಾರವಾಡ (IITDh), ಮತ್ತು JCB ಇಂಡಿಯಾ ಲಿಮಿಟೆಡ್ ನಡುವೆ ತಿಳುವಳಿಕೆ ಸ್ಮರಣಿಕೆ (MoU) .**

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಧಾರವಾಡ (IITDh), ಮತ್ತು JCB ಇಂಡಿಯಾ ಲಿಮಿಟೆಡ್ ನಡುವೆ ತಿಳುವಳಿಕೆಯ ಸ್ಮರಣಿಕೆಯನ್ನು ವಿನಿಮಯ ಮಾಡಿಕೊಳ್ಳಲು ಕಾರ್ಯಕ್ರಮವೊಂದನ್ನು ಆನ್‌ಲೈನ್‌ನಲ್ಲಿ ದಿನಾಂಕ 14.12.2021 ರಂದು, ಶ್ರೀ ವಿನಾಯಕ ಚಟರ್ಜಿ, ಅಧ್ಯಕ್ಷರು ಆಡಳಿತ ಮಂಡಳಿ, ಐಐಟಿ ಧಾರವಾಡ, ಪ್ರೊ. ಪಿ. ಶೇಷು, ನಿರ್ದೇಶಕರು, ಐಐಟಿ ಧಾರವಾಡ, ಶ್ರೀ ದೀಪಕ್ ಶೆಟ್ಟಿ, ಸಿಇಒ ಮತ್ತು ಎಂಡಿ, JCB ಇಂಡಿಯಾ ಲಿಮಿಟೆಡ್, ಇವರ ಉಪಸ್ಥಿತಿಯಲ್ಲಿ ನಡೆಸಲಾಯಿತು.

ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಮಷೀನ್ ಲರ್ನಿಂಗ್, ಇಂಟರ್ನೆಟ್ ಆಫ್ ಥಿಂಗ್ಸ್, ಎಲೆಕ್ಟ್ರಿಕ್ ಡ್ರೈವ್ ಸಿಸ್ಟಮ್ಸ್, ಸೆನ್ಸರ್‌ಗಳು ಮತ್ತು ಕ್ಯಾರೆಕ್ಟರೈಸೇಶನ್, ಕ್ಲೀನ್ ಎನರ್ಜಿ ಮುಂತಾದ ಕ್ಷೇತ್ರಗಳಲ್ಲಿ JCB ಇಂಡಿಯಾ ಮತ್ತು ಐಐಟಿ ಧಾರವಾಡ ನಡುವೆ ಸಹಯೋಗದ ಅವಕಾಶಗಳಿವೆ.

ಪ್ರೊ. ಶೇಷು ಮಾತನಾಡಿ, ಐಐಟಿ ಧಾರವಾಡದ ಆಸಕ್ತ ಅಧ್ಯಾಪಕರುಗಳಿಗೆ ಕೈಗಾರಿಕೆ ಸಹಯೋಗದೊಂದಿಗೆ ಸಂಶೋಧನೆ ಮಾಡುವುದು ರಕ್ತಗತವಾಗಿದೆ ಮತ್ತು ದೇಶ ವಿದೇಶಗಳಲ್ಲಿ ಸಮಾಜ ಎದುರಿಸುತ್ತಿರುವ ಸವಾಲುಗಳಿಗೆ ಸ್ಪಂದಿಸುತ್ತ ಸಂಶೋಧನೆಯ ಮೂಲಕ ಉತ್ತರಗಳನ್ನು ಕಂಡುಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು. ಮುಂದುವರೆದು, ಸಂಸ್ಥೆಯ ದೇಶ ವಿದೇಶಗಳಲ್ಲಿ ವ್ಯಾಸಂಗ ಮಾಡಿ, ತರಬೇತಿಯನ್ನು ಪಡೆದಿರುವ ಅಧ್ಯಾಪಕರುಗಳು ಯುವ ಶಕ್ತಿಯನ್ನು ಹೊಂದಿದ್ದು ಈ ಸಹಯೋಗದ ಲಾಭವನ್ನು ಸಮಾಜಕ್ಕೆ ತಲುಪಿಸಲು ಉತ್ಸುಕರಾಗಿದ್ದಾರೆ ಎಂದು ತಿಳಿಸಿದರು.

ಶ್ರೀ ವಿನಾಯಕ ಚಟರ್ಜಿಯವರು ಮಾತನಾಡಿ ಐಐಟಿ ಧಾರವಾಡ ಮತ್ತು JCB ಇಂಡಿಯಾ ನಡುವಿನ ಆಸಕ್ತಕರ ಸಂಶೋಧನೆಗಳಿಂದ ಧಾರವಾಡ ನಗರದಲ್ಲಿ ಕೌಶಲ್ಯ ಬಲವರ್ಧನೆಗೆ ಕೇಂದ್ರಗಳನ್ನು ಸ್ಥಾಪಿಸುವ ಸಾಧ್ಯತೆಗಳಿವೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ದೇಶದ ಯಶಸ್ಸಿಗೆ ಶಿಕ್ಷಣ ಸಂಸ್ಥೆಗಳು, ಕೈಗಾರಿಕೆಗಳು ಮತ್ತು ಸರ್ಕಾರಗಳು ಒಗ್ಗೂಡಿ ಕೆಲಸ ಮಾಡಬೇಕು ಹಾಗೆ ಕೈಗಾರಿಕೆಗಳು ಶೈಕ್ಷಣಿಕ ಕ್ಷೇತ್ರದಲ್ಲಿಇರುವಂಹ ಬುದ್ದಿವಂತಿಕೆಯ ಲಾಭವನ್ನು ಪಡೆದುಕೊಳ್ಳಬೇಕು ಎಂದು ಶ್ರೀ ದೀಪಕ್ ಶೆಟ್ಟಿ ಪ್ರಸ್ತಾಪಿಸಿದರು. ನಿಜ ಜೀವನದ ಸವಾಲುಗಳಿಗೆ ಪ್ರಾಯೋಗಿಕ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ಗಮನಹರಿಸಬೇಕು ಎಂದು ಹೇಳಿದರು.